ನವೆಂಬರ್ 01, 2016

ಆರ್ ಬಿ ಐ ಶಾಖೆ ಲೊಕೇಟರ್ ನ್ನು  ಜನಗಣತಿ 2011 ಪ್ರಕಾರ  ನವೀಕರಣಗೊಳಿಸಿದೆ

ವಾಣಿಜ್ಯ ಬ್ಯಾಂಕುಗಳ  ಕಚೇರಿಗಳ ಪಟ್ಟಿಯನ್ನು ಹೊಂದಿರುವ  ತನ್ನ ಜಾಲತಾಣದ ಬ್ಯ್ರಾಂಚ್  ಲೊಕೇಟರ್  ಲಿಂಕ್ ನ್ನು   ಭಾರತೀಯ ರಿಸರ್ವ್ ಬ್ಯಾಂಕ್  ಪರಿಷ್ಕರಿಸಿದೆ. ಈ ಲಿಂಕ್ ನಲ್ಲಿ ಜನಗಣತಿ 2011 ಪ್ರಕಾರ ಇರುವ ನೂತನ ಬೇಸ್ ಜನಸಂಖ್ಯೆಯೊಂದಿಗೆ  ವಿವಿಧ ಜನಸಂಖ್ಯೆಯ ಆಧಾರದ ಮೇಲೆ ಶಾಖೆ/ ಕಚೇರಿಗಳನ್ನು ವರ್ಗೀಕರಣ ಮಾಡಲಾಗಿದೆ.  ಆರ್ ಬಿ ಐ ಸುತ್ತೋಲೆ ಪ್ರಕಾರ (RBI/2016 17/60/DBR.No.BAPD.BC.12/22.01.001/2016-17 dated September 1, 2016) ಜನಗಣತಿ 2011 ರ ಆಧಾರದ ಮೇಲೆ ಕೇಂದ್ರಗಳಲ್ಲಿ ಜನಸಂಖ್ಯೆ  ವರ್ಗೀಕರಣ ಮಾಡಿರುವ  ಪರಿಣಾಮಕಾರಿ ದಿನಾಂಕ ಸೆಪ್ಟೆಂಬರ್ 1, 2016 ಆಗಿದೆ.

ಬ್ಯಾಂಕ್ ಶಾಖೆಗಳು / ಕಚೇರಿಗಳನ್ನು ಹೊಂದಿರುವ ಕೇಂದ್ರಗಳನ್ನು (ಗ್ರಾಮ / ಪಟ್ಟಣ) ನಾಲ್ಕು ಗುಂಪುಗಳಾಗಿ (ಗ್ರಾಮೀಣ, ಅರೆ ನಗರ, ನಗರ ಮತ್ತು ಮಹಾನಗರ) ಇತ್ತೀಚಿನ (2011) ಜನಗಣತಿ ಮಾಹಿತಿ ಪ್ರಕಾರ ಅದರ ಜನಸಂಖ್ಯೆಯ ಆಧಾರದ ಮೇಲೆ ವರ್ಗೀಕರಿಸಲಾಗಿದೆ. ಬ್ರ್ಯಾಂಚ್ ಲೋಕಟರ್ ನಲ್ಲಿರುವ ಸಂಬಂಧಿತ ಟಿಪ್ಪಣಿಗಳು ಹಾಗೂ ಕೇಂದ್ರಗಳನ್ನು  ಗುರುತಿಸುವಲ್ಲಿ ಉಪಯೋಗಿಸಿದ ವಿವರವಾದ ಮಾರ್ಗಸೂಚಿಗಳನ್ನು (https://rbi.org.in/scripts/bs_viewcontent.aspx?Id=2035) ಲಿಂಕ್ ನಲ್ಲಿ ನವೀಕರಿಸಲಾಗಿದೆ.

ಭಾರತೀಯ ರಿಸರ್ವ್ ಬ್ಯಾಂಕ್  ಈ ಮಾಹಿತಿಗಳನ್ನು ಬ್ಯಾಂಕುಗಳಿಂದ ಒದಗಿಸಲ್ಪಟ್ಟ ಶಾಖಾ ಅಧಿಕಾರದ ಮೇಲೆ ಇರುವ ಮಾಸ್ಟರ್ ಸುತ್ತೋಲೆ ಮಾಹಿತಿಯ  ಆಧಾರದ ಮೇಲೆ ಸ್ಂಗ್ರಹಿಸಿದೆ.

**ಪತ್ರಿಕಾ ಪ್ರಕಟಣೆ : 2016/2017/1081**

**ಅಲ್ಪನಾ ಕಿಲಾವಲಾ**
**ಮುಖ್ಯ ಸಲಹೆಗಾರರು**